ಭದ್ರಪಡಿಸಿಕೊಂಡ. ಅಲ್ಲದೇ, ದಸರಾ ಹಬ್ಬದ ಸಂದರ್ಭದಲ್ಲಿ ಐದು ದಿನಗಳ ವರೆಗೆ ಮಠದ ಆವರಣದಲ್ಲಿ ನಡೆಯುತ್ತಿದ್ದ ಆಧ್ಯಾತ್ಮಿಕ ಜಾತ್ರೆಯಲ್ಲಿ ಹಾಕಲಾಗುತ್ತಿದ್ದ ಬೃಹತ್ ವೇದಿಕೆಯ ಸಂಪೂರ್ಣ ಖರ್ಚನ್ನು ತಾನೇ ನೋಡಿಕೊಳ್ಳತೊಡಗಿದ. ಇದು, ಎಂಎಲ್ಎ ಶರಣಪ್ಪನ ಮೇಲೆ ಪಂಚಯ್ಯಸ್ವಾಮಿಗಳಿಗೆ ನಂಬಿಕೆ ಮತ್ತು ವಿಶ್ವಾಸ ಬೆಳೆಯುವುದಕ್ಕೆ ಕಾರಣವಾಯಿತು. ಆದರೆ, ಈ ನಂಬಿಕೆ ಮತ್ತು ವಿಶ್ವಾಸವನ್ನು ಆತ ಮತಗಳಾಗಿ ಪರಿವರ್ತಿಸಿಕೊಳ್ಳಲು ಮುಂದಾದ. ಅದಕ್ಕೆ ಪೀಠಿಕೆಯಾಗಿ ಮಠದ ಆದಾಯವನ್ನು ಶಾಶ್ವತವಾಗಿ ಹೆಚ್ಚಿಸುವ ನೆಪದಲ್ಲಿ ವಿರಕ್ತ ಮಠಕ್ಕೆ ಸರ್ಕಾರದಿಂದ ಡಿಗ್ರಿ ಕಾಲೇಜು ಮತ್ತು ಓದಲು ಬರುವ ಹೆಣ್ಣು ಮಕ್ಕಳಿಗಾಗಿ ಹಾಸ್ಟೇಲು ಮಂಜೂರು ಮಾಡಿಸಿಕೊಟ್ಟ. ಹೀಗಾಗಿ, ತಮ್ಮೂರಿನ ಮಕ್ಕಳು ಅಕ್ಷರ ಕಲಿಯಲು ಅನುಕೂಲ ಮಾಡಿಕೊಟ್ಟ ಶರಣಪ್ಪನ ಮೇಲೆ ಜನರಿಗೂ ಸಹ ನಂಬಿಕೆ ಮೂಡಲಾರಂಭಿಸಿತು. ಅವರು ಎಂಎಲ್ಎ ಶರಣಪ್ಪ ಜನಾನುರಾಗಿ ರಾಜಕಾರಣಿ ಎಂದು ಮಾತನಾಡಿಕೊಳ್ಳತೊಡಗಿದರು. ಇದರ ಪ್ರತಿಫಲವಾಗಿ ವಿರಕ್ತ ಮಠಕ್ಕೆ ಆತ ಅನಿವಾರ್ಯವಾಗಿ ಹೋಗಲು ಪಂಚಯ್ಯಸ್ವಾಮಿಗಳು ಸಹ ಮಠದ ವಿಚಾರದಲ್ಲಿ ಯಾವುದೇ ನಿರ್ಧಾರ ಕೈಗೊಳ್ಳುವುದಾದರೂ ಆತನ ಸಲಹೆ ಸೂಚನೆಗಳನ್ನು ಪಡೆಯಲಾರಂಭಿಸಿದರು. ಈ ಎಲ್ಲದರ ಫಲವಾಗಿ ಮುಂದೆ ಬಂದ ಚುನಾವಣೆಯಲ್ಲಿ ಮಠಕ್ಕೆ ನಡೆದುಕೊಳ್ಳುವ ಹತ್ತಾರು ಹಳ್ಳಿಗಳ ಭಕ್ತರ ಮತಗಳೆಲ್ಲ ಆತನಿಗೆ ಒಲಿದು ಬಂದು ಎರಡನೆಯ ಬಾರಿ ಎಂಎಲ್ಎ ಆಗಿ ಚುನಾಯಿತನಾದನಷ್ಟೇ ಅಲ್ಲ... ಮಂತ್ರಿಯೂ ಆಗಿಬಿಟ್ಟ! ವಿಚಿತ್ರವೆಂದರೆ ಇದೆಲ್ಲ ಎರಡ್ಮೂರು ವರ್ಷಗಳೊಳಗೆ ಪವಾಡವೆಂಬಂತೆ ನಡೆದು ಹೋಯಿತು.

ತನಗೆ ಒದಗಿ ಬಂದ ಮಂತ್ರಿ ಪದವಿ ವಿರಕ್ತ ಮಠ ನೀಡಿದ ಭಿಕ್ಷೆ ಎಂದು ಅರಿತಿದ್ದ ಶರಣಪ್ಪ, ಮಠಕ್ಕೆ ಶಾಶ್ವತವಾಗಿ ಉಳಿಯುವಂಥ ಏನಾದರೂ ಕೊಡುಗೆ ನೀಡಬೇಕೆಂದು ನಿರ್ಧರಿಸಿದ. ಅದರಂತೆ ಮಠದ ಆವರಣದಲ್ಲಿ ಪಂಚಯ್ಯಸ್ವಾಮಿಗಳು ಅಧ್ಯಾತ್ಮಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಬೃಹತ್ತಾದ ವೇದಿಕೆಯನ್ನು ನಿರ್ಮಿಸಿ, ಅದರ ಮುಂದೆ ಜನರು



ಕುಂತು ಕೇಳಲು ಮೇಲೆ ಸೂರಿಗೆ ತಗಡಿನ ಸೀಟುಗಳನ್ನು ಹಾಕಿಸಿ ಕೊಟ್ಟ. ಅಷ್ಟೇ ಅಲ್ಲದೇ ವಿದೇಶದಲ್ಲಿ ನೆಲೆಸಿರುವ ನಮ್ಮ ನಾಡಿನ ಜನರಿಗೆ ಅಧ್ಯಾತ್ಮದ ಬಗ್ಗೆ ಅರಿವು ಮೂಡಿಸಲೆಂದು ಪಂಚಯ್ಯಸ್ವಾಮಿಗಳನ್ನು ವಿದೇಶಿ ಪ್ರವಾಸಕ್ಕೆ ಕಳಿಸಿಕೊಡುವ ವ್ಯವಸ್ಥೆ ಮಾಡಿದ. ಪಂಚಯ್ಯಸ್ವಾಮಿಗಳಿಗೆ ಇದೆಲ್ಲ ಬೇಕಾಗಿರಲಿಲ್ಲವಾದರೂ ಶರಣಪ್ಪನ ಒತ್ತಾಯಕ್ಕೆ ಒಪ್ಪಿಕೊಂಡು ವಿದೇಶಿ ಪ್ರವಾಸಕ್ಕೆ ಹೋಗಿ ಬಂದರು. ಆದರೆ, ವಿಚಿತ್ರವೆಂದರೆ ಒಲ್ಲದ ಮನಸ್ಸಿನಿಂದ ವಿದೇಶಿ ಪ್ರವಾಸಕ್ಕೆ ಹೋಗುವಾಗಿದ್ದ ಪಂಚಯ್ಯಸ್ವಾಮಿಗಳ ಮನಸ್ಥಿತಿ ಮರಳಿ ಸ್ವದೇಶಕ್ಕೆ ಬರುವಾಗ ಇರಲಿಲ್ಲ! ಹಾಗೆ ನೋಡಿದರೆ ಅವರು ವಿದೇಶಿ ಪ್ರವಾಸಕ್ಕೆ ಹೋಗಿ ಬಂದದ್ದೇ ತಪ್ಪಾಯಿತು.

## ಮಾಯೆ: ಮೂರು

ಪಂಚಯ್ಯಸ್ವಾಮಿಗಳು ವಿದೇಶಿ ಪ್ರವಾಸವನ್ನು ಮುಗಿಸಿಕೊಂಡು ಬಂದ ಮೇಲೆ ಅವರಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಎದಕೇನೋ ಅವರ